SASKEN

# ಸಾಸ್ಕೆನ್ ಟೆಕ್ನಾಲಜೀಸ್ ಲಿಮಿಟೆಡ್

(ಇದಕ್ಕೂ ಹಿಂದೆ ಸಾಸ್ಕೆನ್ ಕಮ್ಯುನಿಕೇಶನ್ ಟೆಕ್ನಾಲಜೀಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ನೋಂದಾಯಿತ ಕಛೇರಿ: 139/25, ರಿಂಗ್ ರೋಡ್, ದೊಮ್ಮಲೂರು, ಬೆಂಗಳೂರು - 560 071.

ದೂರವಾಣಿ : + 91 80 6694 3000; ಫ್ಯಾಕ್ಸ್ : + 91 80 2535 1309

ಇ-ಮೇಲ್: investor@sasken.com; ವೆಬ್ ಸೈಟ್: www.sasken.com

CIN: L72100KA1989PLC014226

# ತಿಳಿವಳಿಕೆ ಪತ್ರ

ಶ್ರೀ ಬನ್ಸಿ ಎಸ್.ಮೆಹ್ತಾ ಅವರು 75 ವರ್ಷಗಳನ್ನು ದಾಟಿರುವ ಹಿನ್ನೆಲೆಯಲ್ಲಿ, ಅವರ ಉಳಿದ ಅಧಿಕಾರಾವಧಿಗೆ ಅವರನ್ನು ಕಂಪನಿಯ ಕಾರ್ಯನಿರ್ವಾಹಕೇತರ (ನಾನ್-ಎಕ್ಸಿಕ್ಯುಟೀವ್) ಸ್ವತಂತ್ರ ನಿರ್ದೇಶಕರನ್ನಾಗಿ ಮುಂದುವರಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಕಂಪನಿ ಕಾಯ್ದೆ 2013 ವಿಧಿವಿಧಾನಗಳ ಪ್ರಕಾರ ಕಂಪನಿಯ ಸದಸ್ಯರುಗಳಿಗೆ ಮತದಾನ ತಿಳಿವಳಿಕೆ ಪತ್ರವನ್ನು (ಬ್ಯಾಲಟ್ ನೋಟಿಸ್) ಅಂಚೆಯ ಮೂಲಕ ಫೆಬ್ರವರಿ 25, 2019ರ ಹೊತ್ತಿಗೆ ರವಾನಿಸಲಾಗಿದೆ. ಇದರ ಜೊತೆಗೆ, ಕಂಪನಿಯಲ್ಲಿ/ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳಲ್ಲಿ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸಿರುವ ಸದಸ್ಯರುಗಳಿಗೆ (ಎ) ವಿದ್ಯುನ್ಮಾನ ವಿಧಾನದ ಮತಪತ್ರಗಳನ್ನು ಕಳುಹಿಸಿ ಕೊಡಲಾಗಿದೆ. ಅಲ್ಲದೆ, (ಬಿ) ಕಂಪನಿಯಲ್ಲಿ/ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳಲ್ಲಿ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳದೆ ಇರುವಂತಹ ಸದಸ್ಯರುಗಳಿಗೆ ಅಂಚೆಗಳ ಮೂಲಕ ಮತಪತ್ರಗಳನ್ನು ತಲುಪಿಸಲಾಗಿದೆ. ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವೈರ್‌ಮೆಂಟ್ಸ್) ಕಾಯ್ದೆ, 2015 ನಿಯಮ 17 (1ಎ) ಅಡಿಯಲ್ಲಿ ಅಂಗೀಕರಿಸಬೇಕಿರುವ ವಿಶೇಷ ನಿರ್ಣಯದ ಸಂಬಂಧ ಈ ಪ್ರಕ್ರಿಯೆಯನ್ನು ನಡೆಸಲಾಗಿದೆ.

ಇನ್ನುಮುಂದೆ ನಡೆಯಲಿರುವ ಪ್ರಕ್ರಿಯೆಯು, ಅಂಚೆ ಮೂಲಕ (ಪೋಸ್ಟಲ್ ಬ್ಯಾಲಟ್) ಮಾತ್ರವಲ್ಲದೆ ವಿದ್ಯುನ್ಮಾನ ವಿಧಾನದ ಮೂಲಕವೂ ಮತವನ್ನು ಚಲಾಯಿಸಬಹುದಾಗಿದೆ (ಇ-ವೋಟಿಂಗ್). ಹೀಗಾಗಿ, ಸದಸ್ಯರುಗಳು ಇ-ವೋಟಿಂಗ್/ಅಂಚೆ ವಿಧಾನಗಳಲ್ಲಿ ಮತ ಚಲಾಯಿಸುವ ಅವಕಾಶಗಳನ್ನು ಹೊಂದಿರುತ್ತಾರೆ.

ನಿಗದಿತ ದಿನಾಂಕ, ಅಂದರೆ ಫೆಬ್ರವರಿ 15, 2019 ಕ್ಕೆ ಸರಿಹೊಂದುವಂತೆ ಷೇರುದಾರರು ಕಂಪನಿಯಲ್ಲಿ ತಾವು ಹೊಂದಿರುವ ಪೇಯ್ಡ್-ಅಪ್ ಷೇರು ಬಂಡವಾಳದ ಪ್ರಮಾಣಕ್ಕೆ ಅನುಗುಣವಾಗಿ ಮತದಾನದ ಹಕ್ಕನ್ನು ಹೊಂದಿರುತ್ತಾರೆ. ಹೀಗಾಗಿ, ಮೇಲ್ಕಂಡ ನಿಗದಿತ ದಿನಾಂಕದ ಹೊತ್ತಿಗೆ ಕಂಪನಿಯ ಸದಸ್ಯರಾಗದೆ ಇರುವವರು ತಮಗೆ ಬಂದಿರುವ ತಿಳಿವಳಿಕೆ ಪತ್ರ(ನೋಟಿಸ್)ವನ್ನು 'ಕೇವಲ ಮಾಹಿತಿಗಾಗಿ ಮಾತ್ರ' ಎಂದು ತಿಳಿಯತಕ್ಕದ್ದು.

ಅಂಚೆ ಮತದಾನ ಮತ್ತು ಇ-ವೋಟಿಂಗ್ ಮತದಾನ ಪ್ರಕ್ರಿಯೆಯು ಫೆಬ್ರವರಿ 26, 2019 ರಂದು (ಬೆಳಿಗ್ಗೆ 10 ಗಂಟೆಗೆ) ಆರಂಭವಾಗಿ ಮಾರ್ಚ್ 27, 2019ರಂದು (ಸಂಜೆ 5 ಗಂಟೆಗೆ) ಮುಕ್ತಾಯವಾಗುತ್ತದೆ. ಇದಾದ ನಂತರ ಇ-ವೋಟಿಂಗ್ ಸೌಲಭ್ಯವನ್ನು ರದ್ದುಗೊಳಿಸಲಾಗುವುದು. ಹಾಗೆಯೇ, ಅಂಚೆ ಮೂಲಕ ಮತದಾನ ಮಾಡಲು ಬಯಸುವ ಸದಸ್ಯರುಗಳು ಸರಿಯಾಗಿ ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಮತಪತ್ರಗಳನ್ನು ತಮ್ಮ ಸ್ವವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ಮಾರ್ಚ್ 27, 2019ರ ಸಂಜೆ 5 ಗಂಟೆ ಅಥವಾ ಅದಕ್ಕೂ ಮೊದಲು ಪರೀಕ್ಷಾಧಿಕಾರಿಗೆ ಕಳುಹಿಸತಕ್ಕದ್ದು. ಆನಂತರ ಬಂದ ಮತಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

ಮತದಾನಕ್ಕೆ ಸಂಬಂಧಿಸಿದ ತಿಳಿವಳಿಕೆ ಪತ್ರಗಳು (ನೋಟಿಸ್) ಕಂಪನಿಯ ವೆಬ್-ಸೈಟ್ www.sasken.comನಲ್ಲಿ ಮತ್ತು ಮೆಸರ್ಸ್ ಕಾರ್ವಿ ಫೈನ್-ಟೆಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ (ಹಿಂದೆ 'ಕಾರ್ವಿ ಕಂಪ್ಯೂಟರ್‌ಶೇರ್ ಪ್ರೈ.ಲಿ.,') ಇ-ವೋಟಿಂಗ್ ಪೋರ್ಟಲ್ ಆಗಿರುವ https://evoting.karvy.com ನಲ್ಲಿ ಕೂಡ ಲಭ್ಯವಿದೆ. ತಿಳಿವಳಿಕೆ ಪತ್ರವನ್ನು ರವಾನಿಸಿದ ನಂತರ ಕಂಪನಿಯ ಸದಸ್ಯರಾಗಿರುವವರು ಮತ್ತು ನಿಗದಿತ ದಿನಾಂಕದೊಳಗೆ ಕಂಪನಿಯ ಷೇರುಗಳನ್ನು ಹೊಂದಿರುವವರು anandan.k@karvy.comಗೆ ಮನವಿಯನ್ನು ಕಳಿಸುವ ಮೂಲಕ ತಮ್ಮ ಲಾಗಿನ್ ಐ.ಡಿ. ಮತ್ತು ಪಾಸ್ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಒಂದು ವೇಳೆ, ಇಂತಹ ಸದಸ್ಯರುಗಳು ರಿಮೋಟ್ ಇ-ವೋಟಿಂಗ್ ಸೌಲಭ್ಯಕ್ಕಾಗಿ ಈಗಾಗಲೇ ಕಾರ್ವಿ ಸಂಸ್ಥೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಲ್ಲಿ, ಅಂಥವರು ಈಗಾಗಲೇ ತಾವು ಉಪಯೋಗಿಸುತ್ತಿರುವ 'ಯೂಸರ್ ಐಡಿ' ಮತ್ತು ಪಾಸ್‌ವರ್ಡ್‌ಗಳನ್ನೇ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಬಳಸಬಹುದು. ಆಕಸ್ಮಾತ್ ತಿಳಿವಳಿಕೆ ಪತ್ರ/ಮತಪತ್ರಗಳು ಯಾವುದೇ ಸದಸ್ಯರಿಗೆ ಇನ್ನೂ ತಲುಪದೇ ಇದ್ದ ಪಕ್ಷದಲ್ಲಿ ಅಂತಹ ಸದಸ್ಯರುಗಳು ಇವುಗಳನ್ನು ಕಂಪನಿಯ ವೆಬ್-ಸೈಟಿನಿಂದ ಡೌನ್-ಲೋಡ್ ಮಾಡಿಕೊಳ್ಳಬಹುದು ಅಥವಾ ಕೆಳಗೆ ಕೊಟ್ಟಿರುವ ಕಾರ್ವಿ ಕಂಪನಿಯ ವಿಳಾಸಕ್ಕೆ ಪತ್ರ ಬರೆದು ಅವುಗಳ ನಕಲನ್ನು ಪಡೆದುಕೊಳ್ಳಬಹುದು.

ಕಾರ್ವಿ ಕಂಪನಿಯು ಒದಗಿಸುತ್ತಿರುವ ಇ-ವೋಟಿಂಗ್ ಸೌಲಭ್ಯವು https://evoting.karvy.com ಈ ಲಿಂಕ್ ನಲ್ಲಿ ಸಿಗಲಿದೆ. ಸದಸ್ಯರುಗಳಿಗೆ ಈ ಸಂಬಂಧ ಯಾವುದೇ ವಿವರಣೆ/ಮಾಹಿತಿ ಬೇಕಿದ್ದಲ್ಲಿ ಇದರಲ್ಲಿರುವ 'ಫ್ರೀಕ್ವೆಂಟ್ಲಿ ಆಸ್ಕ್‌ಡ್ ಕ್ವೆಶ್ಚನ್ಸ್' (FAQs) ವಿಭಾಗವನ್ನು ನೋಡಬಹುದು. ಅಲ್ಲದೆ, ಮೇಲ್ಕಂಡ ಲಿಂಕ್‌ನ ಡೌನ್ ಲೋಡ್ಸ್ ವಿಭಾಗದಲ್ಲಿರುವ ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಗಮನಿಸಬಹುದು. ಉಳಿದಂತೆ, ಅಂಚೆ ಮತ ಚಲಾವಣೆಗೆ ಸಂಬಂಧಿಸಿದಂತೆ ಏನಾದರೂ ಸಂಶಯಗಳಿದ್ದಲ್ಲಿ ಸದಸ್ಯರುಗಳು ಶ್ರೀ ಕೆ.ಆನಂದನ್, ವ್ಯವಸ್ಥಾಪಕರು, ಮೆಸರ್ಸ್ ಕಾರ್ವಿ ಫೈನ್-ಟೆಕ್ ಪ್ರೈವೇಟ್ ಲಿಮಿಟೆಡ್, ಕಾರ್ವಿ ಸೆಲೆನಿಯಂ, ಟವರ್ ಬಿ, ಪ್ಲಾಟ್ ನಂ. 31-32, ಗಚಿಬೌಲ್ವಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಾಕರಾಮಗುಡಾ, ಹೈದರಾಬಾದ್ 500 032 ಅಥವಾ + 91 40 6716 2222ರಲ್ಲಿ ಅಥವಾ ಕಾರ್ವಿಯ ದರರಹಿತದ ನಂ.1-800-3454-001 ಅಥವಾ einward.ris@karvy.com ಗೆ ಅಥವಾ ಕಂಪನಿಯ ನೋಂದಾಯಿತ ಕಚೇರಿಯಲ್ಲಿರುವ ಕಂಪನಿಯ ಕಾರ್ಯದರ್ಶಿಗಳಿಗೆ ಖುದ್ದಾಗಿ ಬರೆಯಬಹುದು ಅಥವಾ cosec@sasken.com ಗೆ ಸಂಪರ್ಕಿಸಬಹುದಾಗಿದೆ.

ಆಡಳಿತ ಮಂಡಳಿಯ ಆದೇಶದ ಮೇರೆಗೆ
**ಸಾಸ್ಕೆನ್ ಟೆಕ್ನಾಲಜೀಸ್ ಲಿಮಿಟೆಡ್**
ಎಸ್.ಪ್ರಸಾದ್
ಎವಿಪಿ ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 25, 2019